# 61102

## First Semester B.Sc. Degree Examination, August/September 2021

*(CBCS Scheme – Freshers-Repeaters – 2018-19 Onwards)*

### ಕನ್ನಡ ಭಾಷೆ

### Paper I – ಕನ್ನಡ ಭಾಷಾ ಪಠ್ಯ

*Time : 3 Hours]* *[Max. Marks : 70*

I. (ಅ) ಈ ಪದ್ಯದ ಭಾವಾರ್ಥ ಬರೆಯಿರಿ : **(1 × 6 = 6)**

ಏನು ಬಂದಿರಿ ಹದುಳವಿದ್ದಿರೆ ಎಂದರೆ
ನಿಮ್ಮೈಸಿರಿ ಹಾರಿ ಹೋಹುದೆ?
ಕುಳ್ಳಿರೆಂದರೆ ನೆಲ ಕುಳಿಹೋಹುದೆ?
ಒಡನೆ ನುಡಿದಡೆ ಶಿರ, ಹೊಟ್ಟೆಯೊಡೆವುದೇ?
ಕೊಡಲಿಲ್ಲದಿದ್ದಡೊಂದು ಗುಣವಿಲ್ಲದಿದ್ದಡೆ
ಮೂಗ ಕೊಯ್ಯದೆ ಮಾಣ್ಬನೆ ಕೂಡಲಸಂಗಮ ದೇವಯ್ಯ?

(ಆ) **ಎರಡು** ವಿಷಯಗಳಿಗೆ ಟಿಪ್ಪಣಿ ಬರೆಯಿರಿ : **(2 × 2 = 4)**

1. ದ್ರೋಣ
2. ವಚನ
3. ಅಲ್ಲಮಪ್ರಭು
4. ದ.ರಾ. ಬೇಂದ್ರೆ

(ಇ) **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರ ಬರೆಯಿರಿ : **(1 × 10 = 10)**

1. ದುರ್ಯೋಧನನ ವ್ಯಕ್ತಿತ್ವವನ್ನು ಚಿತ್ರಿಸಿ.
2. ಕುರಿಗಳು ಸಾರ್ ಕುರಿಗಳು ಕವಿತೆಯಲ್ಲಿ ವ್ಯವಸ್ಥೆಯ ವಿಡಂಬನೆ ಹೇಗೆ ಮೂಡಿದೆ ಚಿತ್ರಿಸಿ.

II. (ಅ) **ಎರಡನ್ನು** ಕುರಿತು ಸಂಕ್ಷಿಪ್ತವಾಗಿ ಉತ್ತರ ಬರೆಯಿರಿ : **(2 × 5 = 10)**

1. ಮೋಚಿ ಸಹಾಯ ನಿರಾಕರಿಸಲು ಕಾರಣ
2. ಶಕುಂತಲೆ ದುಷ್ಯಂತನೊಂದಿಗೆ ರಾಜಿಯಾಗಲು ಕಾರಣ
3. ಆನಂದರಾಯರು ಕೌಟುಂಬಿಕ ಜೀವನ

(ಆ) **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿ : **(1 × 10 = 10)**

1. ನಿರಾಕರಣೆ ಕತೆಯ ಶಕುಂತಲೆಯ ವ್ಯಕ್ತಿತ್ವ ಭಿನ್ನವಾಗಿ ಚಿತ್ರಿತಗೊಂಡಿದೆ ಹೇಗೆ? ಚರ್ಚಿಸಿ.
2. ಬಡತನದ ಬವಣೆ ಮೋಚಿ ಕತೆಯಲ್ಲಿ ಹೇಗೆ ಮೂಡಿ ಬಂದಿದೆ? ವಿವರಿಸಿ.

III. (ಅ) **ಒಂದನ್ನು** ಕುರಿತು ಸಂಕ್ಷಿಪ್ತವಾಗಿ ಉತ್ತರ ಬರೆಯಿರಿ : **(1 × 5 = 5)**

1. ವೀರ ರಾಜುವಿನ ಶೌರ್ಯದ ಚಿತ್ರಣ

2. ಬೆಳ್ದಿಂಗಳಪ್ಪನ ಪೂಜೆ

(ಆ) **ಒಂದು** ಪ್ರಶ್ನೆಗೆ ವಿವರವಾದ ಉತ್ತರ ಬರೆಯಿರಿ : **(1 × 10 = 10)**

1. ಸಹೋದರರು ಬಯಸಿದ್ದನ್ನೆಲ್ಲಾ ಮಾಮಲೆದಾರರು ಒದಗಿಸಿದರೂ ಆ ನಾಲ್ವರು ಜಾಣರು ಅವುಗಳನ್ನು ಏಕೆ ಮುಟ್ಟಲಿಲ್ಲ? ವಿವರಿಸಿ.

2. ನಗರೀಕರಣದ ಪ್ರಭಾವದಿಂದಾಗಿ ಜಾನಪದ ಹಬ್ಬಗಳು ಕಣ್ಮರೆಯಾಗುತ್ತಿವೆಯೇ, ಬೆಳ್ದಿಂಗಳಪ್ಪನ ಪೂಜೆ ಲೇಖನದ ಹಿನ್ನೆಲೆಯನ್ನು ಚರ್ಚಿಸಿ.

IV. (ಅ) **ಒಂದನ್ನು** ಕುರಿತು ಸಂಕ್ಷಿಪ್ತವಾಗಿ ಉತ್ತರ ಬರೆಯಿರಿ : **(1 × 5 = 5)**

1. ಲೇಖಕರು ಪುಟ್ಟ ಹುಡುಗಿಗೆ ಸೈಕಲ್ ಕಲಿಸಿದ್ದು

2. ಕೃಪಾಕರ ಸೇನಾನಿಯವರಿಗಿರುವ ಕಾಡಿನ ಬಗೆಗಿನ ಕಾಳಜಿ

(ಆ) **ಒಂದು** ಪ್ರಶ್ನೆಗೆ ವಿವರವಾದ ಉತ್ತರ ಬರೆಯಿರಿ : **(1 × 10 = 10)**

1. ಹೆಣ್ಣು ಮತ್ತು ಮದುವೆಯ ಬಗೆಗೆ ಮುಸ್ಲಿಂ ಸಮಾಜದ ನಿಲುವುಗಳೇನು? ಸಾರಾ ಅಬೂಬಕರ್ ಅವರ ಲೇಖನದ ಹಿನ್ನೆಲೆಯಲ್ಲಿ ಚರ್ಚಿಸಿ.

2. 'ಇಲ್ಲಿ ಯಾರೂ ಮುಖ್ಯರಲ್ಲ, ಯಾರೂ ಅಮುಖ್ಯರಲ್ಲ' ಲೇಖನದಲ್ಲಿ ಪ್ರಕೃತಿಯ ಚಿತ್ರಣ ಹೇಗೆ ಮೂಡಿ ಬಂದಿದೆ? ವಿವರಿಸಿ.

---